**ಜಿಲ್ಲಾ ಪೊಲೀಸ್ ಕಛೇರಿ ಮಂಡ್ಯ ಜಿಲ್ಲೆ, ಮಂಡ್ಯ**

# "ಕೆ.ಎಂ.ದೊಡ್ಡಿ ಪೊಲೀಸರ ಕಾರ್ಯಾಚರಣೆ, ಹಗಲು ವೇಳೆಯಲ್ಲಿ ಮನೆಗಳ್ಳತನ ಮತ್ತು ಬೈಕ್ ಕಳ್ಳತನ ಮಾಡಿದ್ದ ಆರೋಪಿಯ ಬಂಧನ, ಸುಮಾರು 18 ಲಕ್ಷ ರೂಗಳ ಮಾಲುಗಳ ವಶ"

**ಸಂಕ್ಷಿಪ್ತ ವಿವರ**

ದಿನಾಂಕ:-04-01-2023 ರಂದು ಕೆ.ಎಂ.ದೊಡ್ಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಶ್ರೀಮತಿ ಸುನೀತ ಎಂಬುವವರ ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಯಾರೋ ಕಳ್ಳರು ಮನೆಯ ಬಾಗಿಲನ್ನು ಹೊಡೆದು ಚಿನ್ನಾಭರಣ ಮತ್ತು ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುವ ಬಗ್ಗೆ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿತ್ತು.

ಸದರಿ ಪ್ರಕರಣದ ಆರೋಪಿಗಳು ಮತ್ತು ಮಾಲು ಪತ್ತೆ ಬಗ್ಗೆ ಕೆ.ಎಂ.ದೊಡ್ಡಿ ಪೊಲೀಸ್ ಠಾಣಾ ಪಿ.ಐ ಮತ್ತು ಸಂಬಂಧಿಸಿದವರ ತಂಡ ರಚನೆ ಮಾಡಲಾಗಿತ್ತು.ಸದರಿ ಆರೋಪಿ ಪತ್ತೆ ತಂಡವು ಪ್ರಕರಣದ ಆರೋಪಿಯನ್ನು ಪತ್ತೆ ಮಾಡಿ ದಸ್ತಗಿರಿ ಮಾಡಿದ್ದು, ಸದರಿ ಆರೋಪಿಯ ಬಂಧನದಿಂದ ಈ ಕೆಳಕಂಡ ಪ್ರಕರಣಗಳು ಪತ್ತೆಯಾಗಿರುತ್ತವೆ.

1. ಕೆ.ಎಂ.ದೊಡ್ಡಿ ಪೊಲೀಸ್ ಠಾಣಾ ಮೊ.ಸಂ.04/2023, ಕಲಂ:-454-380 ಐಪಿಸಿ
2. ಕೆ.ಎಂ.ದೊಡ್ಡಿ ಪೊಲೀಸ್ ಠಾಣಾ ಮೊ.ಸಂ.320/2022, ಕಲಂ:-454-380 ಐಪಿಸಿ
3. ಮಳವಳ್ಳಿ ಗ್ರಾಮಾಂತರ ಠಾಣಾ ಮೊ.ಸಂ.89/2022, ಕಲಂ:-454-380 ಐಪಿಸಿ
4. ಮಂಡ್ಯ ಗ್ರಾಮಾಂತರ ಠಾಣಾ ಮೊ.ಸಂ.41/2022, ಕಲಂ:-454-380 ಐಪಿಸಿ
5. ಮಂಡ್ಯ ಗ್ರಾಮಾಂತರ ಠಾಣಾ ಮೊ.ಸಂ.262/2022, ಕಲಂ:-454-380 ಐಪಿಸಿ
6. ಮಂಡ್ಯ ಗ್ರಾಮಾಂತರ ಠಾಣಾ ಮೊ.ಸಂ.382/2022, ಕಲಂ:-454-380 ಐಪಿಸಿ
7. ಮಂಡ್ಯ ಗ್ರಾಮಾಂತರ ಠಾಣಾ ಮೊ.ಸಂ.29/2023, ಕಲಂ:-379 ಐಪಿಸಿ
8. ಬಸ್ರೂರು ಠಾಣಾ ಮೊ.ಸಂ.153/2022, ಕಲಂ:-379 ಐಪಿಸಿ

ಆರೋಪಿಯು ಕಳ್ಳತನ ಮಾಡಿದ್ದ ಸುಮಾರು 271 ಗ್ರಾಂ ತೂಕದ ಚಿನ್ನಾಭರಣಗಳು, 50 ಗ್ರಾಂ ತೂಕದ ಬೆಳ್ಳಿಯ ಡಾಬು ಮತ್ತು 5,000/- ರೂ ನಗದು ಸೇರಿದಂತೆ 02 ಬೈಕ್‌ಗಳು 01 ಗೂಡ್ಸ್ ಆಟೋಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಇವುಗಳ ಒಟ್ಟು ಮೌಲ್ಯ ಸುಮಾರು 18,00,000 (ಒಟ್ಟು 18 ಲಕ್ಷ ರೂ)ಆಗಿರುತ್ತದೆ.

ಕೆ.ಎಂ.ದೊಡ್ಡಿ ಪೊಲೀಸ್ ಠಾಣಾ ಅಧಿಕಾರಿಗಳು ಮತ್ತು ಸಂಬಂಧಿಸಿದವರ ಈ ಕಾರ್ಯವನ್ನು ಮಾನ್ಯ ಮಂಡ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿ ಪ್ರಶಂಸಿರುತ್ತಾರೆ.

ಸಹಿ/-
ಪೊಲೀಸ್ ಅಧೀಕ್ಷಕರು
ಮಂಡ್ಯ ಜಿಲ್ಲೆ.

